# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 936(980) |
| ಸದಸ್ಯರ ಹೆಸರ | : | ಶ್ರೀ ಶಿವಣ್ಣ ಬಿ.ಎಸ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 25.8.2026 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಸಚಿವರು |

| ಕ್ರ. ಸಂ. | ವಿಷಯ | ಉತ್ತರ |
|---|---|---|
| ಅ) | ರಾಜ್ಯದ ಪೌರಕಾರ್ಮಿಕರ (ಖಾಯಂ, ನೇರ, ಪಾವತಿ, ಗುತ್ತಿಗೆ/ಹೊರಗುತ್ತಿಗೆ) ಮಕ್ಕಳಿಗೆ ಉನ್ನತ ಹಾಗೂ ವೃತ್ತಿಪರ ಶಿಕ್ಷಣವನ್ನು ಉಚಿತವಾಗಿ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ; | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ (ಖಾಯಂ, ನೇರಪಾವತಿ, ಗುತ್ತಿಗೆ / ಹೊರಗುತ್ತಿಗೆ) ಪೌರ ಕಾರ್ಮಿಕರು ಮಕ್ಕಳಿಗೆ ಉನ್ನತ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣ ಸೇರಿದಂತೆ ಉಚಿತ ಶಿಕ್ಷಣ ನೀಡುವ ಯಾವುದೇ ಯೋಜನೆಯು ನಗರಾಭಿವೃದ್ಧಿ ಇಲಾಖೆಯಲ್ಲಿ ಇರುವುದಿಲ್ಲ. |
| ಆ) | ಪ್ರಸ್ತುತ ಈ ಮಕ್ಕಳ ಶೈಕ್ಷಣಿಕ ನೆರವಿಗಾಗಿ (ವಿದ್ಯಾರ್ಥಿವೇತನ, ವಸತಿನಿಲಯ ಇತ್ಯಾದಿ) ಇವರು ಯೋಜನೆಗಳಾವುವು; ಕಳೆದ ಮೂರು ವರ್ಷಗಳಲ್ಲಿ ಇದರಿಂದ ಲಭ್ಯವಾದ ಫಲಾನುಭವಿಗಳ ಜಿಲ್ಲಾವಾರು ವಿವರ ನೀಡುವುದು; | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮದಡಿ ಶೇ. 24.10 ಎಸ್‌ಸಿಎಸ್‌ಪಿ / ಟಿಎಸ್‌ಪಿ ಕಲ್ಯಾಣ ಕಾರ್ಯಕ್ರಮ ಯೋಜನೆಯಡಿ ಈ ಕೆಳಗಿನಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.<br><br>**ಎಸ್.ಎಫ್.ಸಿ ಮುಕ್ತನಿಧಿ /ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ** ಶೇ.24.10 ಎಸ್.ಸಿ.ಎಸ್.ಪಿ /ಟಿ.ಎಸ್.ಪಿ ಕಲ್ಯಾಣ ಕಾರ್ಯಕ್ರಮದಡಿ ಲಭ್ಯವಾಗುವ ಒಟ್ಟು ಅನುದಾನದಲ್ಲಿ ಮೊದಲಿಗೆ ಶೇ.20ರಷ್ಟು ಪೌರಕಾರ್ಮಿಕರ ಕಲ್ಯಾಣಕ್ಕೆ ನಂತರ ಉಳಿಯುವ ಒಟ್ಟು ಮೊತ್ತದಲ್ಲಿ ಶೇ.40ರಷ್ಟು ಸಮುದಾಯ ಆದಾರಿತ ಕಲ್ಯಾಣ ಕಾರ್ಯಕ್ರಮ /ಕಾಮಗಾರಿಗಳಿಗೆ ಹಾಗೂ ಶೇ.60 ರಷ್ಟು ವೈಯಕ್ತಿಕ ಸೌಲಭ್ಯದ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗುತ್ತದೆ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮ ಶೇ.24.10ರ ನಿಧಿಯಲ್ಲಿ ಲಭ್ಯವಾಗುವ ಒಟ್ಟು ನಿಧಿಯಲ್ಲಿ ಮೊದಲಿಗೆ ಪೌರ ಕಾರ್ಮಿಕರ ಕಲ್ಯಾಣ ಯೋಜನೆಗಳಿಗೆ ಶೇ.20ರಷ್ಟನ್ನು ಕಡ್ಡಾಯವಾಗಿ ಮೀಸಲಿಡುವುದು. ಇದರಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾರ್ಯದಲ್ಲಿ ತೊಡಗುವ ಖಾಯಂ /ಹೊರಗುತ್ತಿಗೆ ಪೌರ ಕಾರ್ಮಿಕರು / ಲೋಡರ್ಸ್,ಡ್ರೈವರ್, ಸಫಾಯಿ ಕರ್ಮಚಾರಿ, ಸ್ಕ್ಯಾವೇಂಜರ್ಸ್‌ಗಳಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಆರೋಗ್ಯ ತಪಾಸಣೆ, ವೈದ್ಯಕೀಯ ವೆಚ್ಚ ಮತ್ತು ಸುರಕ್ಷಾ ದಿರಿಸುಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗುತ್ತಿರುತ್ತದೆ.<br><br>ಅ) ಶೇ.60 ರಷ್ಟು ವೈಯಕ್ತಿಕ ಸೌಲಭ್ಯದ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ<br><br>• ಪ್ರೋತ್ಸಾಹಧನ, ಕಂಪ್ಯೂಟರ್, ಲ್ಯಾಪ್‌ಟಾಪ್ ಖರೀದಿಗೆ ಸಹಾಯಧನ ನೀಡಲಾಗುವುದು.<br>• ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಸಹಕಾರ.<br>• ವೈದ್ಯ ವೃತ್ತಿ ಮತ್ತು ವಕೀಲ ವೃತ್ತಿ ಪ್ರಾರಂಭಿಸಲು ಪುಸ್ತಕ ಖರೀದಿಗೆ ಸಹಕಾರ. |

| | | |
|---|---|---|
| | | • ರಾಜ್ಯ ರಾಷ್ಟ್ರೀಯ ಮಟ್ಟದ ಕ್ರೀಡೆ /ಕಲೆ/ಸಾಂಸ್ಕೃತಿಕ ಹಾಗೂ ಇತರ ವ್ಯಾಸಂಗೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ.<br>• ಕೌಶಲ್ಯ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಆ) ಶೇ.40 ರಷ್ಟು ಸಮುದಾಯ ಆದಾರಿತ ಕಲ್ಯಾಣ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ<br><br>• ಮಕ್ಕಳ ವಿದ್ಯಾರ್ಥಿನಿಲಯಗಳ ಉನ್ನತೀಕರಣಕ್ಕೆ ಸಹಕಾರ.<br>• ಗ್ರಂಥಾಲಯಗಳನ್ನು ನಿರ್ಮಿಸಿ ಗ್ರಂಥಾಲಯಗಳ ಬಳಕೆಗೆ ಉತ್ತೇಜನ.<br>• ಕಾನೂನು ಇಲಾಖೆಯ ಸಹಕಾರದೊಂದಿಗೆ ಕಾನೂನು ಅರಿವಿನ ಜಾಗೃತಿ ಶಿಬಿರಗಳ ಆಯೋಜನೆಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br>• ರಸ್ತೆ ಹಾಗೂ ಚರಂಡಿಗಳ ನಿರ್ಮಾಣ<br><br>**ಪೌರಕಾರ್ಮಿಕರ ಗೃಹ ಭಾಗ್ಯ ಯೋಜನೆ :** ರಾಜ್ಯ ಸರ್ಕಾರವು ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಮಹಾನಗರ ಪಾಲಿಕೆಗಳಲ್ಲಿ (BBMP ಸೇರಿದಂತೆ) ನಿರಂತರವಾಗಿ ನೈರ್ಮಲ್ಯ ಸೇವೆಯಲ್ಲಿ ತೊಡಗಿರುವ ಖಾಯಂ ವಸತಿ ರಹಿತ ಪೌರಕಾರ್ಮಿಕರಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗಾಗಿ "ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ' ಅನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 287 ಎಸ್‌ಎಫ್‌ಸಿ 2014, ಬೆಂಗಳೂರು, ದಿನಾಂಕ: 06.02.2015 ರಂದು ಜಾರಿಗೊಳಿಸಿದೆ.<br>• ಸ್ವಂತ ಜಾಗ ಹೊಂದಿರುವ ಖಾಯಂ ಪೌರಕಾರ್ಮಿಕರಿಗೆ ಬಿ.ಎಲ್.ಸಿ. ಉಪಘಟಕದಡಿ ಅವರ ಸ್ಥಳದಲ್ಲೇ ಮಾದರಿ ಮನೆ (Individual House) ನಿರ್ಮಿಸಲು ಆರ್ಥಿಕ ನೀಡಲಾಗುವುದು.<br>• ಜಾಗವಿಲ್ಲದವರಿಗೆ ನಗರ ಪ್ರದೇಶಗಳಲ್ಲಿ ಜಾಗದ ಅಭಾವವಿರುವುದರಿಂದ ಸರ್ಕಾರಿ ಜಮೀನು ಮಂಜೂರು ಮಾಡುವುದು ಅಥವಾ ಖಾಸಗಿ ಜಮೀನು ಖರೀದಿಸಿ 'ಸಮೂಹ ವಸತಿ' (Group Housing /G+3 Apartment)ಮಾದರಿಯಲ್ಲಿ ಮನೆಗಳ ನಿರ್ಮಾಣ ಮಾಡಲಾಗುವುದು.<br><br>ಸರ್ಕಾರವು ಪ್ರತಿ ವಾಸ ಘಟಕಕ್ಕೆ ರೂ.7.50 ಲಕ್ಷಗಳನ್ನು ನಿಗಧಿಪಡಿಸಿದ್ದು, ಈ ಪೈಕಿ ರೂ. 6.00 ಲಕ್ಷಗಳನ್ನು ರಾಜ್ಯ ಸರ್ಕಾರದಿಂದ ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿ ಹಾಗೂ ರೂ.1.50 ಲಕ್ಷಗಳನ್ನು ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಸಹಾಯಧನ ನೀಡಲಾಗುತ್ತದೆ. |
| ಇ) | ಶೈಕ್ಷಣಿಕ ಪ್ರವೇಶಾತಿ ಹಾಗೂ ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಪೌರಕಾರ್ಮಿಕರ ಮಕ್ಕಳಿಗೆ ಪ್ರತ್ಯೇಕ ಮೀಸಲಾತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಇರುವುದಿಲ್ಲ. |
| ಈ) | ಈ ಕುರಿತು ಪೌರಕಾರ್ಮಿಕರ ಕಲ್ಯಾಣ ಮಂಡಳಿ ಅಥವಾ ಸರ್ಕಾರ ಕೈಗೊಂಡಿರುವ ನಿರ್ಧಾರ ಹಾಗೂ ಹೊಸ ಕ್ರಮಗಳೇನು? | |

**ಸಂಖ್ಯೆ:** ನಅಇ 44 ಎಲ್‌ಸಿಕ್ಯೂ 2026

**(ಹೆಚ್.ಸಿ. ಬಾಲಕೃಷ್ಣ)**
ಪೌರಾಡಳಿತ ಸಚಿವರು